ಪ್ರತಿಬಿಂಬ

IIMRD JOURNALS

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5, Special Issue-1, Sep-Oct, 2023, Pp 1-6.**
**www.iimrd.com**
**©*IIMRD*, Mysuru.**

# ಖಂಡಕಾವ್ಯಗಳಲ್ಲಿ ಚಾರಿತ್ರಿಕ ಅಂಶಗಳು

**ಚಿಕ್ಕಣ್ಣ. ಬಿ. ಎಸ್.***

*ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಬ್ಯಾಡಗಿ ಹಾವೇರಿ ಜಿಲ್ಲೆ.

***ಸಾರಾಂಶ: (Abstract)***

ಖಂಡಕಾವ್ಯಗಳು ಕೆಲವು ಸನ್ನಿವೇಶಗಳಲ್ಲಿ ಕವಿಗುಂಟಾದ ರಸಮಯ ಅನುಭವವನ್ನೋ ಅಥವಾ ಆಗ ಕವಿಯಲ್ಲಿ ತಾನಾಗಿ ಮೂಡಿ ಒಂದು ಭಾವಗಳನ್ನೋ ಪ್ರಕಟಪಡಿಸುವ, ಲಿರಿಕ್ ಪೊಯಮ್ ಎಂದು ಇಂಗ್ಲಿಷಿನಲ್ಲಿ ಸಿದ್ಧವಾಗಿರುವ ಕಾವ್ಯರೂಪಗಳೇ ಆಗಿವೆ ಎಂಬುದು ಸ್ಪಷ್ಟವಾಗುತ್ತದೆ. ಈ ಭಾವಗೀತಾತ್ಮಕ ಖಂಡಕಾವ್ಯಗಳಲ್ಲಿ ಭಕ್ತಿ ಪ್ರಧಾನವಾದ ಶೃಂಗಾರ ಪ್ರಧಾನವಾದ ಎರಡು ಬಗೆಗಳಿವೆ. ಭಕ್ತಿ ಪ್ರಧಾನವಾದ ಭಾವಗೀತೆಗಳನ್ನು ಋಗ್ವೇದ, ರಾಮಾಯಣ, ಭಾರತ ಮುಂತಾದುವುಗಳಲ್ಲೂ ಅನಂತರ ಕಾಲದ ಭಗವತ್ ಸ್ತೋತ್ರಗಳಲ್ಲೂ ವಿಶೇಷವಾಗಿ ಕಾಣಬಹುದು. ಶೃಂಗಾರ ಪ್ರಧಾನವಾದುವು ಮುಕ್ತಕಗಳಾಗಿಯೂ ಸರ್ಗಾತ್ಮಕ ವಿದ್ಯಕಾವ್ಯಗಳಾಗಿಯೂ ಹೇರಳವಾಗಿವೆ. ಪ್ರಸ್ತುತ ಲೇಖನದಲ್ಲಿ ಖಂಡಕಾವ್ಯಗಳಲ್ಲಿ ಕಂಡುಬರುವ ಚಾರಿತ್ರಿಕ ಅಂಶಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

***ಮುಖ್ಯಪದಗಳು (Keywords)*** *ಖಂಡಕಾವ್ಯ, ಚಾರಿತ್ರಿಕತೆ, ಕವಿರಾಜಮಾರ್ಗ, ಮಹಾಕಾವ್ಯ, ಆಶಾಕಿರಣ.*

**ಪೀಠಿಕೆ**

ಸಮಕಾಲೀನ ಸಂದರ್ಭದಲ್ಲಿ ಚಾರಿತ್ರಿಕ ನೆಲೆಗಳನ್ನು ಗುರ್ತಿಸುವಾಗ ಭಾಷೆ, ಧರ್ಮ, ಜಾತಿ, ಪಂಗಡ, ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಕೂಲಂಕಷ ವಿವೇಚನೆಯಿಂದ ಚಾರಿತ್ರಿಕ ವಾಸ್ತವಗಳನ್ನು ಹುಡುಕಬೇಕಾಗುತ್ತದೆ. ಕರ್ನಾಟಕದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಿಸಿದಂತೆ ಮಹತ್ವಪೂರ್ಣವಾದ ಅಂಶಗಳು ಅಡಗಿವೆ. ಜನರ ಬದುಕಿನ ರೀತಿ, ನಡೆ ನುಡಿಗಳು, ಆಚಾರ ವಿಚಾರ, ಸಂಪ್ರದಾಯ, ಆಚರಣೆ, ಧಾರ್ಮಿಕ ನಂಬಿಕೆ, ಜೀವನಕಲೆ ಹೀಗೆ ಮನುಷ್ಯ ನಡೆದುಬಂದ ದಾರಿಯನ್ನು ಚರಿತ್ರೆ ತಿಳಿಸಿಕೊಡುತ್ತದೆ.

ಕವಿರಾಜಮಾರ್ಗದಿಂದ ಇಲ್ಲಿಯವರೆಗೂ ಸಾಹಿತ್ಯ ವಿಸ್ತೃತವಾಗಿದೆ. ಪ್ರತಿಯೊಂದು ಕಾಲಘಟ್ಟದ ಸಾಹಿತ್ಯದಲ್ಲೂ ಚಾರಿತ್ರಿಕ ಅಂಶಗಳು ಸೃಜನಶೀಲ ಸಾಹಿತ್ಯದಲ್ಲಿ ಎದ್ದು ಕಾಣುತ್ತವೆ. ಸೃಜನಶೀಲ ಕಾವ್ಯದಲ್ಲಿ ಚರಿತ್ರೆಯ ನೆಲೆ ಕೂಡ ಪ್ರಮುಖವಾದ ಸ್ಥಾನವನ್ನು ಪಡೆದಿದೆ. ಖಂಡಕಾವ್ಯ, ಮಹಾಕಾವ್ಯಗಳಿಗೆ ಚರಿತ್ರೆ ಕಾವ್ಯ ವಸ್ತುವಾಗಿದೆ. ಸಂವೇದನಾಶೀಲ ಕವಿ ತನ್ನ ಅಭಿವ್ಯಕ್ತಿ ಸಾಧ್ಯತೆಗಳನ್ನು ಕಂಡುಕೊಳ್ಳುವಾಗ ಚರಿತ್ರೆಯೊಂದಿಗೆ ಸಂವಾದಿಸುತ್ತಾ ಸಮಕಾಲೀನ ಸಂದರ್ಭದ ತವಕ ತಲ್ಲಣಗಳಿಗೆ ಉತ್ತರ ಕಂಡುಕೊಳ್ಳುತ್ತಾನೆ. ಬರಹದ

*Please cite this article as:* ಚಿಕ್ಕಣ್ಣ. ಬಿ. ಎಸ್. (2023). ಖಂಡಕಾವ್ಯಗಳಲ್ಲಿ ಚಾರಿತ್ರಿಕ ಅಂಶಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ. 1–6.*

ತಾತ್ವಿಕತೆ ಮತ್ತು ಸಾಧ್ಯತೆಗಳು ರೂಪುಗೊಳ್ಳುವುದೇ ನಿನ್ನೆ, ಇಂದು ಮತ್ತು ನಾಳೆಗಳ ಅನುಸಂಧಾನದ ಮೂಲಕ. ಕವಿ ಯಾವ ಕಾಲಘಟ್ಟದಲ್ಲಿ ನಿಂತು ಬರೆದರೂ ಕಾವ್ಯ ಆ ಕಾಲಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಅದರ ಬೇರುಗಳು ಚರಿತ್ರೆಯಲ್ಲಿ ಬೆಸೆದುಕೊಂಡಿದ್ದರೆ ಟಿಸಿಲುಗಳು ನಾಳೆಗಳ ಕನಸನ್ನು ಹೊತ್ತುಕೊಂಡು ಹೊಸ ದಿಕ್ಕಿನ ಕಡೆಗೆ ಬೆಳೆಯುತ್ತಿರುತ್ತವೆ. ಕನ್ನಡದಲ್ಲಿ ಇತಿಹಾಸವನ್ನು ನೇರವಾಗಿ ಕಾವ್ಯ ರಚನೆಗೆ ಬಳಸಿಕೊಂಡಿರುವುದು ವಿರಳ. ಆದರೂ ನಂಜುಂಡ ಕವಿಯ ಕುಮಾರರಾಮ ಚರಿತೆಯಿಂದ ಆರಂಭಗೊಂಡು ಬ್ರಿಟೀಷರ ವಿರುದ್ಧ ತಿರುಗಿಬಿದ್ದ ಚೆನ್ನಮ್ಮ, ರಾಯಣ್ಣ ಮುಂತಾದವರನ್ನು ಒಳಗೊಂಡಂತೆ ಚಾರಿತ್ರಿಕ ಅಂಶಗಳು ಸಾಹಿತ್ಯದಲ್ಲಿ ಕಂಡುಬಂದಿವೆ. ಚಾರಿತ್ರಿಕ ಅಂಶಗಳು ಸ್ಥಳ, ಕುಲ, ಗುರು, ಕುಟುಂಬ ಹಾಗೂ ಚಾರಿತ್ರಿಕ ಪುರುಷರ ಆದರ್ಶಗಳನ್ನು ಸಮಕಾಲೀನಕ್ಕೆ ಅನುಸಂಧಾನ ಮಾಡುವ ನಿಟ್ಟಿನಲ್ಲಿ ಮುಖ್ಯವಾಗುತ್ತವೆ. ಕನ್ನಡ ಆರಂಭಿಕ ಕಾವ್ಯಗಳು ಚಾರಿತ್ರಿಕ ನೆಲೆಯಲ್ಲಿ ರಚನೆಗೊಂಡವು ಅದೊಂದು ಪರಂಪರೆಯಾಗಿ ಬೆಳೆದು ಬಂದಿರುವುದು ಗಮನಾರ್ಹವಾಗಿದೆ. ಆಧುನಿಕ ಸಾಹಿತ್ಯದಲ್ಲೂ ಚಾರಿತ್ರಿಕ ನೆಲೆಯಲ್ಲಿ ಹಲವಾರು ಕಾವ್ಯ, ಖಂಡಕಾವ್ಯ, ಮಹಾಕಾವ್ಯಗಳು ರಚನೆಗೊಂಡಿವೆ. ಇವುಗಳಲ್ಲಿ ಮಹತ್ವದ ವ್ಯಕ್ತಿಗಳು ಕಾವ್ಯನಾಯಕರಾಗಿದ್ದು ಸಮಕಾಲೀನ ಸಂದರ್ಭದಲ್ಲಿ ಸಮುದಾಯ, ಸಮಾಜ, ಧರ್ಮ ಮತ್ತು ಸಂಸ್ಕೃತಿಯ ಮೇಲೆ ಅಪಾರ ಪರಿಣಾಮವನ್ನು ಬೀರಿವೆ

ದಲಿತ ಬಂಡಾಯ ಕಾಲಘಟ್ಟದ ಅನೇಕ ಕವಿಗಳ ಖಂಡಕಾವ್ಯಗಳಲ್ಲಿ ಚಾರಿತ್ರಿಕ ಸಂಗತಿಗಳು ಆಧುನಿಕ ಆಶಯವನ್ನು ವ್ಯಕ್ತಪಡಿಸುವುದು ಕಂಡುಬರುತ್ತದೆ. ಕೆ.ಬಿ.ಸಿದ್ದಯ್ಯನವರ ಬಕಾಲ, ದಕ್ಲಕಥಾ ದೇವಿಕಾವ್ಯ, ಅನಾತ್ಮ, ಗಲ್ಲೆಬಾನಿ ಖಂಡಕಾವ್ಯಗಳು ಚಾರಿತ್ರಿಕ ವಾಸ್ತವಾಂಶಗಳನ್ನು ಸಮಕಾಲೀನಗೊಳಿಸುತ್ತವೆ. ಬಕಾಲನನ್ನು ವರ್ತಮಾನಕ್ಕೆ ಪರಿಚಯಿಸುವಾಗ ಬುದ್ದ ಬದುಕನ್ನು ಧ್ಯಾನಿಸುವರು. ಬುದ್ಧ ಅರಮನೆಯನ್ನು ತ್ಯಜಿಸಿ ಹೊರಟದ್ದು ಚರಿತ್ರೆಯಲ್ಲಿ ಮಹತ್ವದ ಘಟನೆಯಾಗಿದೆ.

***"ಸುಟ್ಟಗಾಯಕೆ ಸುಣ್ಣ ಇಕ್ಕಿದ ವೀರ***
***'ಸಾಖ್ಯ' ವಂಶ ನಿರ್ವಂಶ***
***ರಾಜ್ಯ, ಕೋಶ, ಕುದುರೆ, ಕಾಲಾಳು***
***ಕಾಲಕಸವಾಯ್ತು ಚಿನ್ನದ ಗೋಪುರ***
***ಬಂಡೆ ಬಂಡೆಗಳು ಸಿಡಿದವು ಅಲ್ಲಿ***
***ಕಲ್ಲು ಕುಟಿಗನ ಕೈಲಿ–ಮರಳ ಕಣಗಳೇ ಆಗಿ"***

ಗತ ಚರಿತೆಯ ಜ್ಞಾನದ ಬೆಳಕನ್ನು ಹುಡುಕದಿರು ಎನ್ನುವ ಕವಿಗೆ 'ಸಾಂಖ್ಯ'ವಂಶ, ಕುದುರೆ, ಕಾಲಾಳು ನಾಶವಾಗಿ ಕಾಲ ಕಸವಾದ ಬಗ್ಗೆ ವಿಷಾದವಿದೆ. ರಾಜ್ಯ, ಕೋಶ, ಚಿನ್ನದ ಗೋಪುರ, ಬುದ್ಧನ ಅರಮನೆ ಎಲ್ಲವುಗಳಲ್ಲೂ ಜೀವದ್ರವ್ಯವಿದೆ. ಬುದ್ದನಿಂದಾಗಿ ಜಡಜಗತ್ತು ಚೈತನ್ಯಮಯವಾದ ಪ್ರಜ್ಞೆಯ ಜಗತ್ತು ಎಂಬುದನ್ನು 'ಬಂಡೆಗಳು ಸಿಡಿದವು' ಎಂಬ ಆಸ್ಫೋಟಕ ಸನ್ನಿವೇಶವನ್ನು ಪಡಿಮೂಡಿಸುವರು. ಬುದ್ಧನ ಕಾರುಣ್ಯಕ್ಕೆ ಸಿಲುಕಿದ ಎಲ್ಲರೂ ಆಲದ ಮರದಂತೆ ವಿಶಾಲ ನೆರಳು ನೀಡಿದರು ಎಂಬ ಬಹು ಮುಖ್ಯ ಸಂಗತಿಯು ಪ್ರಸ್ತುತ ಕವಿತೆಯ ಚಾರಿತ್ರಿಕ ಅಂಶವಾಗಿ ಕಂಡುಬರುತ್ತವೆ.

ಸಾಮಾಜಿಕ ಶ್ರೇಣೀಕರಣವನ್ನು ಬದಲಿಸುವ ಮಹತ್ವದ ಹಂಬಲ ಹೊಂದಿದ್ದ ಬಸವಣ್ಣ. ಬುದ್ಧನಂತೆ ತಳಸಮುದಾಯಗಳ ಆಶಾಕಿರಣವಾಗಿದ್ದಾನೆ.

***"ಜಗದಗಲ ಮುಗಿಲಗಲ ಮಗೆಯಗಲ***

***ನಿಮ್ಮಗಲ ಕೂಡಲಸಂಗಮದೇವಾ***

***ತಂದೆ ಹರಳಯ್ಯನವರ ತೊಡೆ ತೊಗಲು***

***ಚಮ್ಮಾವುಗೆ ನಿಮಗೆ"***

ಬಸವಣ್ಣ ಜಾತಿ ಸಮುದಾಯಗಳ ಮೌಢ್ಯತೆಯನ್ನು ತೊಡೆದು ಹಾಕಲು ಪಣತೊಟ್ಟು, ಜಾತಿ ಸಾಮರಸ್ಯ ಮೂಡಿಸಲು ಅಂತರ್ಜಾತಿ ವಿವಾಹದಂತಹ ಕ್ರಾಂತಿಕಾರಿ ನಿಲುವು ತಾಳಿದ್ದನು. ಬಸವಣ್ಣನಿಗೆ ಮಾದಿಗ ಸಮುದಾಯದ ಹರಳಯ್ಯ ದಂಪತಿಗಳು ತೊಡೆಯ ಚರ್ಮದಿಂದ ಚಮ್ಮಾವುಗೆ ಮಾಡಿಕೊಟ್ಟಿದ್ದು, ಮಹತ್ವದ ಘಟನೆಯಾಗಿದೆ. ಸಾವಿರಾರು ದಲಿತ ಶರಣರು ಬಸವಣ್ಣನ ಅನುಯಾಯಿಗಳಾಗಿರುವುದು ಸಾಂಸ್ಕೃತಿಕ ಚರಿತ್ರೆಯಲ್ಲಿ ಸ್ಪಷ್ಟವಾಗಿದೆ.

ದಕ್ಲಕಥಾ ದೇವಿ ಕಾವ್ಯದಲ್ಲಿ ಬುದ್ಧನ ಚಾರಿತ್ರಿಕ ಸಂಗತಿಗಳು ಇಣುಕುತ್ತವೆ. ಹೆಣ್ಣು, ಹೊನ್ನು, ಮಣ್ಣನ್ನು ಮೌನದಲ್ಲೇ ಜಯಿಸಿದ ಬುದ್ಧಪ್ರಜ್ಞೆ ಸಮಕಾಲೀನ ಜಗತ್ತಿಗೆ ಅವಶ್ಯಕ ಎನ್ನುವ ಆಶಯವನ್ನು ಖಂಡಕಾವ್ಯ ಒಳಗೊಂಡಿದೆ. ದಕ್ಲಯ್ಯ ತನ್ನೆರಡು ಮಕ್ಕಳನ್ನು ಭುಜದ ಮೇಲೆ ಕೂರಿಸಿಕೊಂಡು ನಡೆಯುತ್ತಾ ಗಾಂಧೀಜಿಯ ವ್ಯಕ್ತಿತ್ವ, ಸರಳ ಬದುಕು, ಸ್ವಾತಂತ್ರ್ಯವನ್ನು ತಂದುಕೊಟ್ಟ ನಂತರ ಗಾಂಧಿಯನ್ನು ಕೊಂದ ಕಥೆಯನ್ನು  ಹೇಳುತ್ತಾನೆ. ದೇಶದ ಹಿತಚಿಂತನೆಗಾಗಿ ಪ್ರಾಣತ್ಯಾಗ ಮಾಡಿದ ಗಾಂಧೀಜಿ ಬಗ್ಗೆ ದಕ್ಕಲಯ್ಯ ಮತ್ತು ಕವಿ ಇಬ್ಬರಿಗೂ ನೋವು ವಿಷಾದವಿದೆ. ಅನಂತರ ಬಸವಣ್ಣನ ಕ್ರಾಂತಿಕಾರಿ ಸಾಮಾಜಿಕ ಆಂದೋಲನದ ಉದ್ದೇಶ, ಹರಳಯ್ಯನ ಮಗ, ಮದುವರಸಯ್ಯನ ಮಗಳಿಗೆ ಅಂತರ್ಜಾತಿ ವಿವಾಹ ಮಾಡುವ ಮೂಲಕ ಆಂದೋಲನ ಅಂತ್ಯಕಂಡ ಕತೆಯನ್ನು ತಿಳಿಸುತ್ತಾನೆ. ಅವರ ಬಲಿದಾನದ ಫಲವಾಗಿ ಸಮಾನತೆಯ ಬೆಳಕನ್ನು ನಾಡು ಕಂಡಿರುವ ಚಾರಿತ್ರಿಕ ಸತ್ಯ ಸಂಗತಿಗಳನ್ನು ತಿಳಿಸುತ್ತಾನೆ.

ಅಕ್ಷರ ವಂಚಿತ ದಕ್ಲಯ್ಯನಲ್ಲೂ ಬದುಕಿನ ಅದಮ್ಯವಾದ ಆಶಾಭಾವನೆ ಇದೆ. ತನ್ನ ಮಕ್ಕಳಿಗೆ ಚರಿತ್ರೆಯನ್ನು ನಿರೂಪಿಸುತ್ತ ವಾಸ್ತವ ಸಂಗತಿಗಳನ್ನು ಬಿಚ್ಚಿಡುತ್ತಾನೆ. ಅಂಬೇಡ್ಕರ್ ಅವರ ಸಮಾನತೆಯ ತತ್ವ ದೇಶಕ್ಕೆ ಅಗತ್ಯವಾಗಿದೆ ಗಾಂಧೀಜಿ ಮತ್ತು ಬಸವಣ್ಣ ಮರಳಿ ಬಂದರೆ ಇಬ್ಬರು ಮಕ್ಕಳನ್ನು ಗಾಂಧೀಜಿ ಕೈಗಿಟ್ಟು ಬಸವಣ್ಣನ ಕುದುರೆಯೇರಿ ಅಂಬೇಡ್ಕರರ ಹಾಗೆ ದೇಶ ನೋಡುವ ಕೋಶ ಓದುವ ಮಹದಾಸೆಯನ್ನು ವ್ಯಕ್ತಪಡಿಸುತ್ತಾನೆ. ಬುದ್ಧನ ಜೀವಪರ ಕಾಳಜಿ, ಬಸವಣ್ಣನ ಬಂಧುತ್ವ, ಗಾಂಧೀಜಿಯವರ ಅಹಿಂಸಾ ತತ್ವ, ಅಂಬೇಡ್ಕರ್ ಅವರ ಸಮಾನತೆಯ ತತ್ವದ ಅಗತ್ಯವನ್ನು ದಕ್ಲಯ್ಯನ ಮೂಲಕ ಕಂಡುಕೊಳ್ಳಲಾಗಿದೆ.

ಬುದ್ಧ ಜಗತ್ತಿಗೆ ಯುದ್ಧ ಬೇಡವೆಂದು ಮಾನವತ್ವದ ಸಂದೇಶ ಸಾರಿದವನು. ಇಪ್ಪತ್ತನೆ ಶತಮಾನದ ಜಾಗತಿಕ ಸಮಸ್ಯೆಗಳಲ್ಲಿ ಯುದ್ಧ ಭೀಕರ ಘಟನೆಗಳಿಗೆ ಜಗತ್ತು ಸಾಕ್ಷಿಯಾಗಿದೆ. ಪಾಶ್ಚಿಮಾತ್ಯ ರಾಷ್ಟ್ರಗಳ ಹಿಡಿತ ಹೊಂದಿರುವ ಜಾಗತೀಕರಣ ತನ್ನ ಕಬಂಧ ಬಾಹುವನ್ನು ಪೂರ್ವದ ರಾಷ್ಟ್ರಗಳ ಮೇಲೆ ಚಾಚಿದೆ. ಪೌರಾತ್ಯ ರಾಷ್ಟ್ರಗಳು ಜಾಗತೀಕರಣದ ಹಿಡಿತದಲ್ಲಿದ್ದು ಸಾಮಾಜಿಕ, ಆರ್ಥಿಕ ಪೈಪೋಟಿಯಿಂದ ಯುದ್ಧಗಳು

ನಡೆಯುತ್ತಿವೆ. ಶ್ರೀಮಂತರು ಮತ್ತಷ್ಟು ಶ್ರೀಮಂತರಾಗಿ ಹಸಿವು ಜಾಗತಿಕ ಸಮಸ್ಯೆಯಾಗಿ ಕಾಡುತ್ತದೆ. ಯುದ್ಧದಿಂದ ಇಥಿಯೋಪಿಯಾದಲ್ಲಾದ ಹಸಿವಿನ ದಾರುಣತೆಯನ್ನು ನೆನೆದು ಕವಿ ದುಃಖಿಸುವರು. ಹಸಿವಿನ ಹೋರಾಟವನ್ನು ಕೊನೆಗಾಣಿಸಲು ಶಸ್ತ್ರಾಸ್ತ್ರಕ್ಕಾಗಿ ಹಂಬಲಿಸುವರು. ಜಗತ್ತಿನಲ್ಲಿ ಹಸಿವು, ಬಡತನ, ಜಾತಿಯ ಯುದ್ಧಗಳು ನಡೆದಿರುವ ಕಾರಣ ಜಾಗತಿಕ ಶಾಂತಿಗಾಗಿ ಬುದ್ಧನ ಕಾರುಣ್ಯ ಅಗತ್ಯವಾಗಿರುವುದನ್ನು ಈ ಕಾವ್ಯಗಳು ವ್ಯಕ್ತಪಡಿಸುತ್ತವೆ.

ಮೊಗಳ್ಳಿ ಗಣೇಶ್ ಅವರ 'ದೇವಸ್ಮಶಾನ' ವಿಜಯನಗರ ಸಾಮ್ರಾಜ್ಯದ ಚಾರಿತ್ರಿಕ ವೈಭವದ ವಸ್ತುವಿಟ್ಟುಕೊಂಡು ರಚನೆಯಾದ ಖಂಡಕಾವ್ಯ. ವೈಭವಯುತವಾಗಿ ಆಳ್ವಿಕೆ ಮಾಡಿದ ವಿಜಯನಗರದಲ್ಲಿ ಪಳೆಯುಳಿಕೆಯಾಗಿ ಉಳಿದಿರುವ ಚಾರಿತ್ರಿಕ ಘಟನೆಗಳು ಕಾವ್ಯದಲ್ಲಿವೆ. ಸಮಕಾಲೀನ ಸಂದರ್ಭದಲ್ಲಿ ಅದು ತಲುಪಿರುವ ಸ್ಥಿತಿಗೆ ವಿಷಾದಿಸುತ್ತಾ ಗತಸಾಮ್ರಾಜ್ಯದ ಸಾಂಸ್ಕೃತಿಕ ಉಳಿಯುವಿಕೆಗಾಗಿ ಆಗಬೇಕಾದ ಕಾಯಕಲ್ಪದ ಕಡೆ ಖಂಡಕಾವ್ಯ ಗಮನ ಸೆಳೆಯುವುದು.

***"ಪಾಳುಬಿದ್ದ ಕೋಟೆ ಕೊತ್ತಲಲ್ಲಿ ಅಸ್ಥಿಪಂಜರದ ರಂಗೋಲಿ***
***ಎದ್ದು ಬೀಸುವರಿಲ್ಲ ಗಂಟೆಜಾಗಟೆ ಸದ್ದಿಲ್ಲ***
***ಏರು ಕಟ್ಟುವುದಿಲ್ಲ ಕೋಳಿ ಮೊದಲೇ ಕೂಗುವುದಿಲ್ಲ***
***ಬಿಕೋ ಎನ್ನುತ್ತಿದೆ ಸಾಮ್ರಾಜ್ಯದ ಗರ್ವಭಂಗವಾಗಿ"***

ಚರಿತ್ರೆಯಲ್ಲಿ ಹಂಪೆಯ ವೈಭವ ವಿಶಿಷ್ಟವಾಗಿ ದಾಖಲಾಗಿದೆ. ಆದರೆ ಆಧುನಿಕ ಕಾಲಘಟ್ಟದಲ್ಲಿ ಚರಿತ್ರೆಯ ಕುರುಹುಗಳು ಮಾತ್ರ ಉಳಿದು ಮೂಕವೇದನೆ ಚಿತ್ರಣಗೊಂಡಿದೆ. ಸಾಮ್ರಾಜ್ಯದ ಒಳಿತಿಗಾಗಿ ರಾಜಗುರುವು ನೀಡುತ್ತಿದ್ದ ನ್ಯಾಯದೇವಿಯ ಕಗ್ಗೊಲೆಯಾಗಿದೆ. ವಂದಿಮಾಗದರ ಸತ್ಕರಿಸುವ, ನೀತಿವಂತರ ಸದ್ದಡಗಿಸಿದ ಜ್ಞಾನಿಗಳ ತಲೆದಂಡವಾಗಿದೆ. ರಾಜನರ್ತಕಿಯರು ಕಲ್ಲಾಗಿ ನಿಂತಿದ್ದಾರೆ. ರಣವೀರರು ಕನಸಿನಂತೆ ಭಾಸವಾಗುತ್ತಾರೆ. ಗಾಯಗೊಂಡ ಶಿಲ್ಪಶವ ಸಮುಚ್ಚಯಗಳು ಹಂಪೆಯಲ್ಲಿ ಹರಡಿ ಬಿದ್ದಿವೆ. ಆದಿಮರು ರಚಿಸಿದ ಗುಪ್ತ ಚಿತ್ರಗಳು ಕುರೂಪಗೊಂಡಿವೆ. ಶಂಖ, ಜಾಗಟೆ, ಡಮರು ಕಹಳೆ ಜೈಕಾರ ಬಲಿಪೂಜೆಯ ಮಾರಣ ಹೋಮಕುಂಡದಲ್ಲಿ ಸುಟ್ಟ ಹೆಣ ಇಂತಹ ನೂರಾರು ಚಾರಿತ್ರಿಕ ಘಟನೆಗಳ ಸಂಕೀರ್ಣತೆ ಖಂಡಕಾವ್ಯದಲ್ಲಿದೆ.

ಎಂ.ಎಸ್.ಶೇಖರ್ ಅವರ ಧೂರ್ತಳ್ಳಿಗೊಂದು ಕಿರಿಯ ಪ್ರಾಥಮಿಕವೂ.....ಕೇರಿಗೊಂದು ಕೂಲಿಮಠವೂ...... ಘಟನಾಧಾರಿತ ಚಾರಿತ್ರಿಕ ಅಂಶಗಳಿಂದ ಕಾವ್ಯ ರೂಪುಗೊಂಡಿದೆ. ಶಿಕ್ಷಣಕ್ಕಾಗಿ ಅನೇಕ ಹೋರಾಟಗಳು ದೇಶದಲ್ಲಿ ನಡೆದಿವೆ. ಧೂರ್ತಳ್ಳಿಯ ಶಾಲೆಯನ್ನು ಸ್ಥಗಿತಗೊಳಿಸುವ ಆಲೋಚನೆಯನ್ನು ಪಟೇಲರು ಪ್ರಸ್ಥಾಪಿಸಿದಾಗ, ರುದ್ರಯ್ಯನವರು ಅಂಬೇಡ್ಕರ್‌ರವರ ನಡೆಸಿದ ಹೋರಾಟ, ಬದುಕಿನ ಸಂಘರ್ಷದ ಕಥೆಯನ್ನು ಹೇಳಿದರು. ದಮನಿತರು, ಅಸ್ಪೃಶ್ಯರು, ಮಹಿಳೆಯರು ಶಿಕ್ಷಣದಿಂದ ವಂಚಿತರಾಗಬಾರದೆಂಬ ಸಾಂವಿಧಾನಿಕ ತಿಳುವಳಿಕೆಯನ್ನು ಪಟೇಲರಿಗೆ ಸ್ಪಷ್ಟಪಡಿಸಿದರು. "ಮಾರಾಜ್ರು ನಾಲ್ವಡಿಯವರ, ಚಂದದಾಸ್ಟೆಲ್ ನೋಡಿ, ಕರುಳುಗಳ ದೂರಕೆ ಎರಡು ತೊಟ್ಟು ಕಣ್ಣೀರಾಕಿ"

ಮೈಸೂರು ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರು ಜಾರಿಗೆ ತಂದ ಮೀಸಲಾತಿಯ ಪರಿಕಲ್ಪನೆಯಿಂದ ಹಲವು ದಲಿತ ಸಮುದಾಯಗಳು ಬೆಳಕು ಕಂಡವು. ಸಾಮಾಜಿಕ ಬದಲಾವಣೆಗೆ ಪ್ರೇರಕರಾದರು. ಇಂತಹ ಪರಿಕಲ್ಪನೆಯಿಂದ ಪ್ರಭಾವಗೊಂಡ ಅಂಬೇಡ್ಕರ್ ಮೀಸಲಾತಿಯನ್ನು ಜಾರಿಗೆ ತಂದರು. ಶೋಷಿತರ ಬಗೆಗಿನ ಸಾಮಾಜಿಕ ಕಾಳಜಿ ಇದನ್ನು ಕೇಳಿದ ಪಟೇಲರಿಗೆ ಶಿಕ್ಷಣದ ಮಹತ್ವ ಅರಿವಾಯಿತು. ಶಾಲೆ ಮುಚ್ಚಿಸುವ ಹಠವನ್ನು ಕೈಬಿಟ್ಟರು.

***"ರನ್ನದಕ್ಷರವ ಕಲಿಸುತ, ಊರಗಲದ***

***ಅರಳಿಮರ ಸುಯ್ಯ ತೋರಿಸಿ, ತೋರಿಸಿದರು***

***ಬೋಧಿಯ ಬೆಳಕ, ಧೂರ್ತಳ್ಳಿ ಕೇರಿಮಕ್ಕಳಿಗೆ"***

ಕುಂಟು ಮೇಷ್ಟರು ಹೊಲಗೇರಿಯ ಮಕ್ಕಳಿಗೆ ಜಿಲ್ಲಾ ಹಾಸ್ಟೆಲ್‌ನಲ್ಲಿದ್ದು ಶಿಕ್ಷಣ ಕಲಿಯಲು ಅವಕಾಶ ಕೊಡಿಸಿದರು. ಕೇರಿಯ ಮಕ್ಕಳಿಗೆ ಅಧ್ಯಯನದ ಶಿಸ್ತು, ಕಾಗುಣಿತ, ಲೆಕ್ಕ, ಹಾಡುಗಳನ್ನು ಕಲಿಸಿದರು. ಹುಣ್ಣಿಮೆಯ ಚಂದಿರನ ಪೂಜೆಮಾಡಿಸಿ ಅಕ್ಷರವನ್ನು ಕಲಿಸಿದರು. ಜೀವಂತ ಕಪ್ಪು ಲೋಕಕೆ ರನ್ನದ ಅಕ್ಷರವನ್ನು ಕಲಿಸುತ್ತ ಅರಳಿಮರ ತೋರಿಸಿ ದೂರ್ತಳ್ಳಿಯ ಕೇರಿ ಮಕ್ಕಳಿಗೆ ಬೋಧಿಯ ಬೆಳಕನ್ನು ತೋರಿಸಿಕೊಟ್ಟನು. ಸಿದ್ದಾರ್ಥನಾಗಿದ್ದವನು ಬುದ್ಧನಾದುದು ಬೋಧಿವೃಕ್ಷದ ಅಡಿಯಲ್ಲಿ ಎಂಬುದು ಚಾರಿತ್ರಿಕ ಸತ್ಯ. ಹಳ್ಳಿಯಲ್ಲಿ ಶಾಲೆಯನ್ನು ತೆರೆಯುವ ಮೂಲಕ ಅಕ್ಷರ ವಂಚಿತ ಸಮುದಾಯಕ್ಕೆ ಅಕ್ಷರ ಕಲಿಯಲು ಸಾಧ್ಯವಾಗಿಸಿದ ಚಾರಿತ್ರಿಕ ಮಹತ್ವವನ್ನು ಈ ಖಂಡಕಾವ್ಯ ಪ್ರತಿಪಾದಿಸುತ್ತದೆ.

ರವಿಕುಮಾರ್ ನೀಹ ಅವರ 'ಜಲಜಂಬೂ ಕನ್ನೆ' ಸಮುದಾಯದ ಕಥನವುಳ್ಳ ಖಂಡಕಾವ್ಯ. ವರ್ತಮಾನದಲ್ಲಿ ಮಾದಿಗ ಕುಲ ಶೋಷಣೆಗೆ ಒಳಗಾಗಿದ್ದರೂ ಸಮುದಾಯದ ಪ್ರತಿನಿಧಿಯಾಗಿ ಹಲವು ತಡೆಗೋಡೆಗಳ ಒಡೆದು ರಾಜ್ಯಾಧಿಕಾರವನ್ನು ಹಿಡಿದ ಕುಲತೇಜ ಕುರಂಗರಾಜ ಚರಿತ್ರೆಯಲ್ಲಿ ದಾಖಲಾಗಿರುವ ರಾಜನಾಗಿದ್ದಾನೆ.

***"ತೊಗಲೇ ತೊಲೆ ಬಾಗಿಲು***

***ತೊಗಲ ನಾಣ್ಯವ ಜಗಕೆ ಹರಡಿದ***

***ತೊಗಲ ಕುಲದ ತೊಗಲ ರಾಜ ಕುರಂಗರಾಯ"***

ಚರಿತ್ರೆಯ ಕತ್ತಲಿನಲ್ಲಿ ಮರೆಯಾಗಿದ್ದ ಕುರಂಗರಾಯ ಇತ್ತೀಚೆಗೆ ಸಾಹಿತ್ಯ ಸಂಶೋಧನೆಗಳ ಮೂಲಕ ದಕ್ಕಿದ್ದಾನೆ. ಇದು ದಲಿತರ ಸಾಂಸ್ಕೃತಿಕ ಚರಿತ್ರೆಯ ವಿಸ್ತರಣೆಗೆ ಅವಕಾಶ ಮಾಡಿಕೊಟ್ಟಿದೆ. ಕುರಂಗರಾಜ ತೊಗಲ ಒಕ್ಕಲು, ಆತ ಜಾರಿಗೆ ತಂದ ತೊಗಲ ನಾಣ್ಯವು ಕರ್ನಾಟಕದ ಚರಿತ್ರೆಯಲ್ಲಿ ದಾಖಲಾಗಿದೆ. ಮಾದಿಗ ಸಮುದಾಯವು ಚರಿತ್ರೆಯಲ್ಲಿ ತನ್ನ ಛಾಪು ಮೂಡಿಸಿರುವುದು ಕಂಡುಬರುತ್ತದೆ.

ಚರಿತ್ರೆಯನ್ನು ಬೇರೊಂದು ನೆಲೆಯಲ್ಲಿ ಪ್ರತಿಪಾದಿಸುವ ಪ್ರಯತ್ನವನ್ನು ಹೆಚ್. ಲಕ್ಷ್ಮಿನಾರಾಯಣ ಅವರ 'ಜಾಲಿಮರದ ಜೋಳಿಗೆಯಲ್ಲಿ' ಖಂಡಕಾವ್ಯ ಮಾಡುತ್ತದೆ. ಚರಿತ್ರೆಯ ಮತ್ತೊಂದು ಮುಖವನ್ನು ವರ್ತಮಾನದ ಸನ್ನಿವೇಶಗಳನ್ನು ಸ್ಪಷ್ಟಪಡಿಸುವುದಕ್ಕಾಗಿಯೇ ಅನೇಕ ಚಾರಿತ್ರಿಕ ಸಂಗತಿಗಳನ್ನು ಮುಖಾಮುಖಿಯಾಗಿದ್ದಾರೆ. ಹರಳಯ್ಯ ದಂಪತಿಗಳು ಚರ್ಮವನ್ನು ಗಲ್ಲೆಬಾನಿಯಲ್ಲಿ ಹದ ಮಾಡಿದಂತೆ

ಬದುಕನ್ನು ಸಾಮಾಜಿಕ ಸಂಘರ್ಷಗಳೊಂದಿಗೆ ಕಟ್ಟಿಕೊಂಡವರು. ತಮ್ಮ ತೊಡೆಯ ಚರ್ಮದಿಂದ ಚಪ್ಪಲಿ ಮಾಡಿ ಬಸವಣ್ಣನಿಗೆ ತೊಡಿಸುವರು. ಅಂಥ ನಿಷ್ಠೆಯುಳ್ಳವರಾಗಿದ್ದರೂ ಹರಳಯ್ಯ ದಂಪತಿಗಳು ಯಾರೂ ಮುಟ್ಟದ 'ಮಸಣದ ಹೂವು'ಗಳಾಗಿದ್ದಾರೆ. ಮಾದಾರ ಚೆನ್ನಯ್ಯ, ಹರಳಯ್ಯ ಮಾದರ ಚರಿತ್ರೆಯಲ್ಲಿ ಅದಮ್ಯ ಭಕ್ತಿ ಮತ್ತು ತ್ಯಾಗದ ಪ್ರತೀಕಗಳಂತೆ ಕಂಡುಬರುತ್ತಾರೆ.

ಮಾದಾರ ಚೆನ್ನಯ್ಯ ಅಪ್ರತಿಮ ಶಿವಭಕ್ತಿಯಿಂದಾಗಿ ಶಾಶ್ವತವಾದ ಸ್ಥಾನವನ್ನು ಪಡೆದಿದ್ದಾನೆ. ಅವನ ಗುಪ್ತಭಕ್ತಿಯನ್ನು ಪ್ರಕಟಗೊಳಿಸಲು ಶಿವನು ಚೋಳರಾಜನ ನೈವೇದ್ಯವನ್ನು ಸ್ವೀಕರಿಸುವುದಿಲ್ಲ. ಕಾರಣವನ್ನು ಹುಡುಕಿದ ಚೋಳರಾಜ ಚೆನ್ನಯ್ಯನಂತಹ ನಿಜಭಕ್ತನಿರುವುದು ದೊಡ್ಡಸಂಗತಿ ಎಂದು ಗರ್ವಪಡುತ್ತಾನೆ. ಚೋಳರಾಜ ಮಾದಾರ ಚೆನ್ನಯ್ಯನ ಗುಡಿಸಲಿಗೆ ಧಾವಿಸುವುದು ಅಂದಿನ ಕಾಲಕ್ಕೆ ವಿಶೇಷ ಸಂಗತಿಯಾಗಿದೆ. ತನ್ನ ಗುಡಿಸಲ ಬಳಿಗೆ ಬಂದ ಚೋಳರಾಜನನ್ನು ಕಂಡ ಚೆನ್ನಯ್ಯ ಭಯ ಭಕ್ತಿಯಿಂದ ಆತಂಕಗೊಳಗಾದ ಚೆನ್ನಯ್ಯನಿಗೆ 'ದೇವನೊಲಿದಾತನೇ ತಾನೆ ಜಾತ ಈ ಲೋಕಕ್ಕೆ' ಎಂದು ಪ್ರಭುತ್ವಕ್ಕಿಂತ ಚೆನ್ನಯ್ಯನ ಭಕ್ತಿ ಶ್ರೇಷ್ಠವೆಂದು ಕೊಂಡಾಡಿದನು. ಗುಡಿಸಲಾದರೂ ಕಾಯಕ ನಿರತನಿಗೆ ಅದೇ ದೇವಾಲಯ ಎಂದು ಸಾರಲಾಗಿದೆ. ಜಾತಿಯ ಕಾರಣಕ್ಕಾಗಿ ಚೆನ್ನಯ್ಯ, ಹರಳಯ್ಯನಂತವರು ಚರಿತ್ರೆಯಲ್ಲಿ ಸ್ಥಾನ ಪಡೆಯದೆ ಹೋದರು. ಹನ್ನೆರಡನೆ ಶತಮಾನದ ವರ್ಣ ಸಂಘರ್ಷದಲ್ಲಿ ದಲಿತರು ಹೆಚ್ಚು ಶೋಷಣೆಗೆ ಒಳಗಾದರು. ಅನಂತರ ನೂರಾರು ವರ್ಷಗಳಿಂದ ದಲಿತರು ಶೋಷಣೆಗೆ ಗುರಿಯಾಗಿ, ಅಕ್ಷರ ವಂಚಿತರಾಗಿರುವ ಚಾರಿತ್ರಿಕ ಸಂಗತಿಯನ್ನು ದಾಖಲಿಸುತ್ತಾರೆ.

**ಪರಾಮರ್ಶನ ಗ್ರಂಥಗಳು**


- ಗಣೇಶ್ ಮೊಗಳ್ಳಿ. (2008). ದೇವಸ್ಮಶಾನ, ಪಲ್ಲವ ಪ್ರಕಾಶನ, ಚನ್ನಪಟ್ಟಣ.
- ಮುನಿವೆಂಕಟಪ್ಪ. ವಿ. (2002). ದಲಿತ ಸಾಹಿತ್ಯ ದರ್ಶನ, ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
- ಲಕ್ಷ್ಮಿನಾರಾಯಣಸ್ವಾಮಿ. ಹೆಚ್. (2014). ಜಾಲಿಮರದ ಜೋಳಿಗೆಯಲ್ಲಿ, ಸಿ.ವಿ.ಜಿ. ಬುಕ್ಸ್, ಬೆಂಗಳೂರು.
- ರವಿಕುಮಾರ್ ನೀಹ. (2011). ಜಲಜಂಬೂ ಕನ್ನೆ. ಅನ್ನಪೂರ್ಣ ಪ್ರಕಾಶನ ಬೆಂಗಳೂರು.
- ರವಿಕುಮಾರ್ ನೀಹ. (2020). ಕಣ್ಣು ಧರಿಸಿ ಕಾಣಿರೊ, ಗೋಮಿನಿ ಪ್ರಕಾಶನ. ತುಮಕೂರು.
- ಶೇಖರ್. ಎಂ. ಎಸ್. (2010). ಧೂರ್ತಳ್ಳಿಗೊಂದು ಕಿರಿಯ ಪ್ರಾಥಮಿಕವೂ ಕೇರಿಗೊಂದು ಕೂಲಿಮಠವೂ ಗರಿಕೆ. ಪಲ್ಲವ ಪ್ರಕಾಶನ, ಚನ್ನಪಟ್ಟಣ.
- ಸಿದ್ದಯ್ಯ ಕೆ. ಬಿ. (2018). ಸಮಗ್ರ ಖಂಡಕಾವ್ಯಗಳು, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.